



ಮಹಾತ್ಮ ಕಬೀರ



ದಾದು ದಯಾಳ್

ಎಂದು ಪ್ರಖ್ಯಾತನಾದ ಕಬೀರ್, ರಾಮಾನಂದನ 12 ಮಂದಿ ಶಿಷ್ಯರಲ್ಲಿ ಒಬ್ಬ. ರಾಧಾ ಸಮೇತ ಕೃಷ್ಣನನ್ನು ಪೂಜಿಸುವ ಮತ್ತೊಂದು ಸಂಪ್ರದಾಯದಲ್ಲಿ ಜಯದೇವ, ವಿಷ್ಣುಸ್ವಾಮಿ, ಚಂಡಿದಾಸ, ವಿದ್ಯಾಪತಿ, ಮೀರಾಬಾಯಿ, ವಲ್ಲಭಾಚಾರ್ಯ, ಚೈತನ್ಯ, ಇತ್ಯಾದಿ ಭಕ್ತರು ಬರುತ್ತಾರೆ.

15-16ನೆಯ ಶತಮಾನಗಳಲ್ಲಿ ಇಷ್ಟು ವ್ಯಾಪಕವಾಗಿ ಇಡೀ ಉತ್ತರ ಭಾರತದಲ್ಲಿ ಭಕ್ತಿ ಚಳವಳಿಗಳು ಮೂಡಿ ಬಂದುದಕ್ಕೆ ಅನೇಕ ಸಂಕೀರ್ಣ ಕಾರಣಗಳಿದ್ದವು. ಅವುಗಳಲ್ಲಿ ಅತಿ ಮುಖ್ಯವಾದ ಒಂದು ಕಾರಣವೆಂದರೆ, ಆ ಕಾಲಘಟ್ಟದಲ್ಲಿ ಉತ್ತರ ಭಾರತದಲ್ಲಿ ಎರಡು ಧರ್ಮಗಳು ಪ್ರಭಾವಿಯಾಗಿದ್ದು, ಪರಸ್ಪರ ಉಗ್ರ ಸ್ಪರ್ಧೆಯಲ್ಲಿ ತೊಡಗಿದ್ದುದು – ಆ ಕಾಲಕ್ಕೆ 2000 ವರ್ಷಗಳ ಇತಿಹಾಸವಿದ್ದ ಹಿಂದೂ ಧರ್ಮ ಮತ್ತು ಸುಮಾರು 800 ವರ್ಷಗಳ ಹಿಂದೆ (ಏಳನೆಯ ಶತಮಾನದಲ್ಲಿ) ಭಾರತವನ್ನು ಪ್ರವೇಶಿಸಿ, ಇಲ್ಲಿಯೇ ನೆಲೆಯೂರಿ, ಮುಸ್ಲಿಂ ಪ್ರಭುತ್ವದ ಆಶ್ರಯದಲ್ಲಿ ಪ್ರಬಲವಾಗಿ ಬೆಳೆದಿದ್ದ ಇಸ್ಲಾಂ ಧರ್ಮ. ಇವೆರಡೂ ಧರ್ಮಗಳಲ್ಲಿ ಶಾಂತಿಪ್ರಿಯರೊಡನೆ ಉಗ್ರ ಸಂಪ್ರದಾಯವಾದಿಗಳೂ ಸಹಜವಾಗಿಯೇ ಇದ್ದರು. ಹೊಸ ನಾಡಿನಲ್ಲಿ ಮತಾಂತರದ ಮೂಲಕ ತಮ್ಮ ಧರ್ಮವನ್ನು ಬೆಳೆಸಲು ಇಸ್ಲಾಂ ಧರ್ಮಾನುಯಾಯಿಗಳು ಪ್ರಯತ್ನಿಸಿದರೆ, ಮತಾಂತರಕ್ಕೆ ಅವಕಾಶವಿರದಿದ್ದ ಹಾಗೂ ಶ್ರೇಣೀಕೃತ ಜಾತಿವ್ಯವಸ್ಥೆಯಿಂದ ಜರ್ಝರಿತವಾದ ಹಿಂದೂ ಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿತ್ತು. ಈ ಧರ್ಮಗಳ ಹಾಗೂ ಧರ್ಮಾನುಯಾಯಿಗಳ ಉಗ್ರ ಸ್ಪರ್ಧೆಯಲ್ಲಿ ಜನಸಾಮಾನ್ಯರ ಬದುಕು ಕಷ್ಟಸಾಧ್ಯವಾಗಿದ್ದುದು ಮಾತ್ರ ನಿಜ. ಈ ಕಾರಣದಿಂದಲೇ, ಕಾಲಕ್ರಮದಲ್ಲಿ ಸ್ವತಂತ್ರ ಪಂಥಗಳಾಗಿ ಬೆಳೆದ ಸಿಖ್ ಪಂಥ, ಕಬೀರ್ ಪಂಥ, ದಾದೂ ಪಂಥ, ಚೈತನ್ಯ ಪಂಥ, ಇತ್ಯಾದಿ ಚಳವಳಿಗಳ ಒಂದು ಮುಖ್ಯ ಲಕ್ಷಣವೆಂದರೆ, ಹಿಂದೂ-ಮುಸ್ಲಿಮ್ ತತ್ವಗಳ ಸಮನ್ವಯ. ಈ ಲೇಖನದಲ್ಲಿ ಇಬ್ಬರು ಶ್ರೇಷ್ಠ ಮುಸ್ಲಿಮ್ ರಾಮಭಕ್ತರ ಪರಿಚಯವಿದೆ – ಕಬೀರ್ ಮತ್ತು ದಾದು ದಯಾಳ್.

* * *